■ ವಿಶಾಖ ಎನ್.

# ಕಾಶ್ಮೀರಿ ಹುಡುಗರ ಹಾಡು

## ಮೋಡಿ ಮಾಡಿತು ನೋಡು

ಮುಂಬೈಗೆ ಕನಸುಗಳ ಮೂಟೆ ಕಟ್ಟಿಕೊಂಡು ಬಂದವರು ಫಾಹೀಮ್ ಅಬ್ದುಲ್ಲಾ ಹಾಗೂ ಅರ್ಸಲಾನ್ ನಿಜಾಮಿ. ಇಬ್ಬರೂ ಕಾಶ್ಮೀರದ ಯುವಕರು. ಅರ್ಸಲಾನ್ ತಮ್ಮ ಕೈಲಿದ್ದ ಸಿವಿಲ್ ಎಂಜಿನಿಯರಿಂಗ್ ಕೆಲಸ ಬಿಟ್ಟಿದ್ದರು. ಫಾಹೀಮ್ ಗುಪ್ತನಾಮದಲ್ಲಿ ಕಾವ್ಯ ಬರೆಯುವುದನ್ನು ಬಿಟ್ಟು, ತಮ್ಮ ಶಾರೀರ ನೆಚ್ಚಿಕೊಂಡು ಹಾಡಿನ ಹಂಗಿಗೆ, ಗುಂಗಿಗೆ ಬಿದ್ದಿದ್ದರು. ಕಾಶ್ಮೀರಿ ಆಡುಭಾಷೆಯಲ್ಲಿ ಇಬ್ಬರೂ ಸೇರಿ ಆಲ್ಬಮ್‌ಗಳನ್ನು ಮಾಡಿದ ಅನುಭವ ಬೆನ್ನಿಗಿತ್ತು. 'ಇಷ್ಕ್' ಎಂಬ ಗೀತೆ ಯೂಟ್ಯೂಬ್ ನೋಡುಗರಲ್ಲೂ ಒಂದು ಮಟ್ಟದ ಜನಪ್ರಿಯತೆ ಪಡೆದಿತ್ತು. ಸಂಗೀತ ತಮ್ಮ ಕೈಹಿಡಿಯುವುದೋ ಇಲ್ಲವೋ ಎಂದು ಪರೀಕ್ಷೆಗೆ ಒಳಪಡಲು ಇಬ್ಬರೂ ತಯಾರಾಗಿ ಬಂದಿದ್ದರು.

ಇಬ್ಬರಲ್ಲೂ ಒಂದು ಸ್ಪಷ್ಟತೆ ಇತ್ತು. ಹದಿನಾಲ್ಕು ದಿನ ಮುಂಬೈನಲ್ಲಿ ಉಳಿದುಕೊಳ್ಳಲು ಹಾಗೂ ಖರ್ಚು ಮಾಡಲು ಎಷ್ಟು ಬೇಕೋ ಅಷ್ಟೇ ಹಣ ಇದ್ದದ್ದು. ಅಷ್ಟರಲ್ಲಿ ಯಾವ ಯಾವ ಸ್ಟುಡಿಯೊಗಳಿಗೆ ಸಾಧ್ಯವೋ, ಎಲ್ಲವುಗಳಿಗೆ ಎಡತಾಕುವುದು. ಅದೃಷ್ಟದ ಕದ ತೆರೆದರೆ ಹಾಡುವುದು ಎಂದು ತೀರ್ಮಾನಿಸಿದ್ದರು.

ಒಂದಾದ ಮೇಲೆ ಒಂದರಂತೆ ಸ್ಟುಡಿಯೊಗಳಿಗೆ ಭೇಟಿ ಕೊಟ್ಟು, ತಮ್ಮ ಕೆಲಸದ ಕುರಿತು ಮನದಟ್ಟು ಮಾಡಿಸಲು ಯತ್ನಿಸಿದರು. ಹನ್ನೆರಡು ದಿನ ಕನಸು ನನಸಾಗಲಿಲ್ಲ. ಹದಿಮೂರನೇ ದಿನ ಸ್ವರ ಸಂಯೋಜಕ ತನಿಷ್ಕ್ ಬಾಗ್ಚಿ ಅವರನ್ನು ಭೇಟಿ ಮಾಡಿದರು. ಅದಾಗಲೇ 'ಇಷ್ಕ್' ಹಾಡನ್ನು ಕೇಳಿ ಫಿದಾ ಆಗಿದ್ದ ತನಿಷ್ಕ್, ಈ ಯುವಕರಿಗೆ ಒಂದು ಹಾಡನ್ನು ಸಂಯೋಜಿಸಿ ಹಾಡುವ ಅವಕಾಶ ನೀಡಲು ಉತ್ಸಾಹ ತೋರಿಸಿದರು. ನಿರ್ದೇಶಕ ಮೋಹಿತ್ ಸೂರಿ ತಮ್ಮ ಸಿನಿಮಾಗೆ ಶೀರ್ಷಿಕೆ ಗೀತೆ ಭಿನ್ನವಾಗಿ ಇರಬೇಕೆಂದು ಬಯಸುತ್ತಿರುವ ಸಂಗತಿಯನ್ನು ಹೇಳಿದರು. ಮೋಹಿತ್ ಅವರಿಗೆ ಈ ಯುವಕರನ್ನು ಪರಿಚಯಿಸಿದರು. ಅಲ್ಲಿಂದಾಚೆಗೆ ಸೃಷ್ಟಿಯಾದದ್ದು ಇತಿಹಾಸ.



'ಸೈಯಾರಾ' ಚಿತ್ರದಲ್ಲಿ ಅಹಾನ್ ಹಾಗೂ ಅನೀತ್



ಫಾಹೀಮ್ ಅಬ್ದುಲ್ಲಾ

'ಸಯ್ಯಾರ' ಹಿಂದಿ ಸಿನಿಮಾ ಶೀರ್ಷಿಕೆ ಗೀತೆಯು ಈಗ ಯುವಜನತೆಯ ನಾಲಗೆಯ ಮೇಲೆ ಜಾಗ ಪಡೆದಿದೆ. ಅರ್ಸಲಾನ್ ಆ ಹಾಡಿನ ಸಂಯೋಜಕ, ಫಾಹೀಮ್ ಗಾಯಕ. ಇಬ್ಬರೂ ಕೂಡಿಟ್ಟ ಹಣವನ್ನು ಹೊತ್ತುಕೊಂಡು, ಕನಸುಗಳ ಬುತ್ತಿ ತಂದಿದ್ದರು. ಆ ಬುತ್ತಿಯಿಂದ ಹೊಸತನದ ಏನನ್ನೋ ರಸಿಕರಿಗೆ ಕೊಟ್ಟರು. ಚಿತ್ರರಂಗದ ಯಾರ ಸಂಪರ್ಕವೂ ಇಲ್ಲದೆ ಹೀಗೆ ಛಲವೊಂದನ್ನೇ ಬಂಡವಾಳ ಮಾಡಿಕೊಂಡು ಬಂದ, ಕಾಶ್ಮೀರಿ ಯುವಕರ ಈ ಸಾಹಸಗಾಥೆ ಈಗ ಆ ನೆಲದಲ್ಲಿ ಅನುರಣಿಸುತ್ತಿದೆ.

ಸಂಗೀತಗಾರರಾದ ಆರ್. ಕೆ. ಕಿಸ್ನಾ ಹಾಗೂ ಅನ್ಶುಮನ್ ಶರ್ಮ ಎಂಬಿಬ್ಬರು ಯುವಕರು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿ 'ಸೈಯಾರ' ಶೀರ್ಷಿಕೆ ಗೀತೆಯನ್ನು ಕಿಶೋರ್ ಕುಮಾರ್ ಅವರ ಕಂಠದಲ್ಲಿ ಸಂಯೋಜಿಸಿದ್ದಾರೆ. ಅನ್ಶುಮನ್ ಅದನ್ನು ಕಿಶೋರ್ ಅವರ ಶೈಲಿಯಲ್ಲಿ ಹಾಡಿ, ಎಐ ಮೂಲಕ 'ರೆಟ್ರೊ' ಶೈಲಿ ದಕ್ಕಿಸಿಕೊಟ್ಟಿದ್ದಾರೆ. ವಾದ್ಯ ಸಂಯೋಜನೆ ಮಾಡಿದವರು ಕಿಸ್ನಾ. ಆ ವಿಡಿಯೊ ಕೂಡ ಸಾಕಷ್ಟು ಹರಿದಾಡಿದ್ದು, ಹೊಸಕಾಲದ ಮನಸ್ಸುಗಳ ಮರುಸೃಷ್ಟಿಯ ಕುರಿತು ಚರ್ಚೆಗೆ ಇಂಬುಗೊಟ್ಟಿದೆ. ■

# 'ಥಾಮಾ'ದಲ್ಲಿ ಆಯುಷ್ಮಾನ್ ರಶ್ಮಿಕಾ

'ಥಾಮಾ' ಎಂಬ ಹಾರರ್–ಕಾಮಿಡಿ ಚಿತ್ರದ ಟೀಸರ್ ಹರಿದಾಡುತ್ತಿದೆ. ಆಯುಷ್ಮಾನ್ ಖುರಾನಾ ಹಾಗೂ ರಶ್ಮಿಕಾ ಮಂದಣ್ಣ ಅಭಿನಯದ ಈ ಸಿನಿಮಾವನ್ನು ಆದಿತ್ಯ ಸರಪೋತದಾರ್ ನಿರ್ದೇಶಿಸಿದ್ದಾರೆ. ದಿನೇಶ್ ವಿಜಯ್, ಅಮರ್ ಕೌಶಿಕ್ ನಿರ್ಮಾಣದ ಈ ಚಿತ್ರವು ಆಯುಷ್ಮಾನ್, ರಶ್ಮಿಕಾ ಇಬ್ಬರೂ ಎಷ್ಟರಮಟ್ಟಿಗೆ ಪ್ರಯೋಗಮುಖಿಗಳು ಎನ್ನುವುದಕ್ಕೆ ಕನ್ನಡಿ ಹಿಡಿಯುತ್ತಿದೆ.

ನವಾಜುದ್ದೀನ್ ಸಿದ್ದಿಕಿ ಅವರೂ ಪ್ರಮುಖ ಪಾತ್ರವೊಂದರಲ್ಲಿ ಅಭಿನಯಿಸಿದ್ದು, ಸಚಿನ್–ಜಿಗರ್ ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಕಳೆದ ವರ್ಷದ ನಡುಘಟ್ಟದಲ್ಲಿ 'ವ್ಯಾಂಪೈರ್ಸ್ ಆಫ್ ವಿಜಯ್' ಎಂಬ ಶೀರ್ಷಿಕೆಯನ್ನು ಈ ಚಿತ್ರಕ್ಕೆ ಇಟ್ಟು, ಪ್ರಕಟಣೆ ಹೊರಡಿಸಲಾಗಿತ್ತು. ಆಮೇಲೆ 'ಥಾಮಾ' ಎಂದು ಹೆಸರನ್ನು ಬದಲಿಸಲಾಗಿದೆ. 'ಮುಂಜ್ಯ' ಎಂಬ ಹಾರರ್–ಕಾಮಿಡಿ ಚಿತ್ರವನ್ನೇ ಈ ಹಿಂದೆ ನಿರ್ದೇಶಿಸಿದ್ದವರು ಆದಿತ್ಯ. ಹೀಗಾಗಿ ಅವರು ಜನರನ್ನು ಹಿಡಿದಿಡುವಂತಹ ಸಿನಿಮಾಗಳನ್ನು ಕೊಡುತ್ತಾರೆ ಎಂಬ ನಂಬಿಕೆ ನಿರ್ಮಾಪಕರಿಗೆ ಇದೆ. ಇದೇ ಮಾದರಿಗೆ ಸೇರಿದ 'ಸ್ತ್ರೀ' ಹಿಂದಿ ಸಿನಿಮಾ ಕೂಡ ಗಲ್ಲಾಪೆಟ್ಟಿಗೆಯಲ್ಲಿ ಭಾರಿ ಸದ್ದು ಮಾಡಿದ್ದನ್ನು ನೆನಪಿಸಿಕೊಳ್ಳಬಹುದು. ■



'ಥಾಮಾ' ಚಿತ್ರದಲ್ಲಿ ರಶ್ಮಿಕಾ, ಆಯುಷ್ಮಾನ್, ನವಾಜುದ್ದೀನ್